**All India Radio: Bangalore**
**National Bulletin In Kannada**
**28.07.2025  1.10pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**28.07.2025 1.10pm**
**<><><><>**

ಮುಖ್ಯಾಂಶಗಳು

೧. ಸದನದಲ್ಲಿ ಮುಂದುವರಿದ ಪ್ರತಿಪಕ್ಷಗಳ ಗದ್ದಲ ; ರಾಜ್ಯಸಭೆ, ಲೋಕಸಭೆ ಕಲಾಪ ಮುಂದೂಡಿಕೆ

೨. ಪ್ರಧಾನಮಂತ್ರಿ ಉಜ್ವಲ್ ಯೋಜನೆಯಿಂದ ಈವರೆಗೆ ೧೦.೩೩ ಕೋಟಿ ಮಹಿಳೆಯರಿಗೆ ಪ್ರಯೋಜನ - ಸಚಿವ ಹರ್ದೀಪ್ ಸಿಂಗ್ ಪುರಿ

೩. ಸ್ವೀಡನ್‌ನಲ್ಲಿಂದು ಅಮೆರಿಕ-ಚೀನಾ ಹೊಸ ಸುತ್ತಿನ ವ್ಯಾಪಾರ ಮಾತುಕತೆ ಆರಂಭ ; ಒಪ್ಪಂದ ವಿಸ್ತರಿಸುವ ನಿರೀಕ್ಷೆ

೪. ಫಿಡೆ ಮಹಿಳಾ ವಿಶ್ವಕಪ್ ಫೈನಲ್ ; ಟೈ ಬ್ರೇಕ್ ಪಂದ್ಯಗಳಲ್ಲಿಂದು ಭಾರತದ ಕೊನೆರು ಹಂಪಿ ಮತ್ತು ದಿವ್ಯಾ ದೇಶಮುಖ್ ಮುಖಾಮುಖಿ

><><><><><><><><

ಲೋಕಸಭೆಯಲ್ಲಿಂದು ಕಲಾಪ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ಸದಸ್ಯರು ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ಘೋಷಣೆಗಳನ್ನು ಕೂಗುತ್ತಾ ಗದ್ದಲ ಎಬ್ಬಿಸಿದ ಹಿನ್ನೆಲೆ ಕಲಾಪವನ್ನು ೧ ಗಂಟೆಗೆ ಮುಂದೂಡಲಾಯಿತು. ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಪ್ರಶ್ನೋತ್ತರ ಕಲಾಪವನ್ನು ಕೈಗೆತ್ತಿಕೊಳ್ಳುತ್ತಿದ್ದಂತೆ ಬಿಹಾರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯನ್ನು ಹಿಂಪಡೆಯುವುದು ಸೇರಿದಂತೆ ಮತ್ತಿತರ ವಿಷಯಗಳ ಕುರಿತು ಘೋಷಣೆಗಳನ್ನು ಕೂಗಿದರು. ಪ್ರಶ್ನೋತ್ತರ ಕಲಾಪವನ್ನು ಸುಗಮವಾಗಿ ನಡೆಸಲು ಸಭಾಧ್ಯಕ್ಷರು ಕೋರಿದರೂ ಗದ್ದಲ ಮುಂದುವರಿದ ಪರಿಣಾಮ ಮೊದಲು ಸದನವನ್ನು ೧೨ ಗಂಟೆಗೆ ನಂತರ ೧ ಗಂಟೆಗೆ ಮುಂದೂಡಲಾಯಿತು. ಇದಕ್ಕೂ ಮುನ್ನ ಸಮಾಜವಾದಿ ಪಕ್ಷದ ಸಂಸದೆ ಡಿಂಪಲ್ ಯಾದವ್

ವಿರುದ್ಧ ಆಲ್ ಇಂಡಿಯಾ ಇಮಾಮ್ ಅಸೋಸಿಯೇಷನ್ ಅಧ್ಯಕ್ಷೆ ಮೌಲಾನಾ ಸಾಜಿದ್ ರಶೀದಿ ಅವರ ಆಕ್ಷೇಪಾರ್ಹ ಹೇಳಿಕೆಗಳನ್ನು ಖಂಡಿಸಿ ಎನ್‌ಡಿಎ ಮೈತ್ರಿಕೂಟದ ಸಂಸದರು ಇಂದು ಸಂಸತ್ತಿನ ಆವರಣದಲ್ಲಿ ಪ್ರತಿಭಟನೆ ನಡೆಸಿದರು.  ಮೌಲಾನಾ ಸಾಜಿದ್ ಅವರ ಹೇಳಿಕೆ ಮಹಿಳಾ ಸಮುದಾಯಕ್ಕೆ ಮಾಡಿದ ಅವಮಾನ ಮತ್ತು ಭಾರತ ಈ ಅವಮಾನವನ್ನು ಸಹಿಸುವುದಿಲ್ಲ ಎಂದು ಎನ್‌ಡಿಎ ಸಂಸದರು ಹೇಳಿದರು. ವರದಿಗಾರರೊಂದಿಗೆ ಮಾತನಾಡಿದ ಲೋಕ ಜನಶಕ್ತಿ ಪಕ್ಷದ ಸಂಸದೆ ಶಾಂಭವಿ ಚೌಧರಿ, ಎನ್‌ಡಿಎಗೆ ಮಹಿಳೆಯರ ಗೌರವ ಮತ್ತು ಪ್ರತಿಷ್ಠೆ ಅತ್ಯಂತ ಆದ್ಯತೆಯಾಗಿದೆ ಎಂದು ಹೇಳಿದರು.

><><><><><><><><

ರಾಜ್ಯಸಭೆಯಲ್ಲಿ ಎಂದಿನಂತೆ ೧೧ ಗಂಟೆಗೆ ಸದನ ಸಭೆ ಸೇರಿದಾಗ ಎಐಎಡಿಎಂಕೆ ಪಕ್ಷದ ಸಂಸದರಾದ ಎನ್. ಧನ್‌ಪಾಲ್ ಮತ್ತು ಐ.ಎಸ್. ಇಂಬದುರೈ ನೂತನ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು. ಆದರೆ ಬಳಿಕ, ಪ್ರತಿಪಕ್ಷಗಳ ಗದ್ದಲದ ನಡುವೆ ಕಲಾಪವನ್ನು ೧೨ ಗಂಟೆಗೆ ಮುಂದೂಡಲಾಯಿತು. ವಿವಿಧ ರಾಜಕೀಯ ಪಕ್ಷಗಳಿಂದ ವಿವಿಧ ವಿಷಯಗಳಿಗೆ ಸಂಬಂಧಿಸಿಂತೆ ಒಟ್ಟು ೨೮ ನಿಲುವಳಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳನ್ನು ತಿರಸ್ಕರಿಸುವುದಾಗಿ ಉಪ ಸಭಾಪತಿ ಹರಿವಂಶ್ ತಿಳಿಸಿದರು. ೧೨ ಗಂಟೆಗೆ ಪುನಃ ಸದನ ಸಭೆ ಸೇರಿದಾಗ ಪೀಠಾಸೀನಾಧಿಕಾರಿ ಘನ ಶ್ಯಾಮ ತಿವಾರಿ ಪ್ರಶ್ನೋತ್ತರ ಕಲಾಪ ನಡೆಸಲು ಪ್ರಯತ್ನಿಸಿದರಾದರೂ ಪ್ರತಿಪಕ್ಷಗಳ ಗದ್ದಲ ಮುಂದುವರಿದ ಬೆನ್ನಲ್ಲೇ ಕಲಾಪವನ್ನು ೨ ಗಂಟೆಗೆ ಮುಂದೂಡಿದರು.

><><><><><><><><

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತದ ಇಂಧನ ವಲಯ ಅಭೂತಪೂರ್ವ ಪರಿವರ್ತನೆಗೆ ಸಾಕ್ಷಿಯಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ. ಶುದ್ಧ ಇಂಧನದ ಸುಲಭ ಲಭ್ಯತೆ ವಿಶೇಷವಾಗಿ ಮಹಿಳಾ ಸಬಲೀಕರಣವನ್ನು ಉತ್ತೇಜಿಸಿದೆ. ಶುದ್ಧ ಇಂಧನ ಪೂರೈಕೆಯ ಪ್ರಮುಖ ಉಪಕ್ರಮವಾದ ಪ್ರಧಾನಮಂತ್ರಿ ಉಜ್ವಲ್ ಯೋಜನೆ ಅಡಿಯಲ್ಲಿ ಎಲ್‌ಪಿಜಿ ಸಂಪರ್ಕ ಒದಗಿಸಿ ಈವರೆಗೆ ೧೦.೩೩

ಕೋಟಿ ಮಹಿಳೆಯರಿಗೆ ಅನುಕೂಲವಾಗಿದೆ ಎಂದಿದ್ದಾರೆ. ಇದರ ಜೊತೆಗೆ ೧.೫೧ ಕೋಟಿ ಮನೆಗಳಿಗೆ ನೈಸರ್ಗಿಕ ಅನಿಲ-ಪಿಎನ್‌ಜಿ ಸಂಪರ್ಕವನ್ನು ಕಲ್ಪಿಸಲಾಗಿದೆ. ಇಂಧನ ಕೈಗಾರಿಕೆಗಳಲ್ಲಿ ಹೆಚ್ಚಿನ ಮಹಿಳೆಯರು ಮುಂದಾಳತ್ವ ವಹಿಸಿದ್ದಾರೆ. ೨೦೨೪-೨೫ನೇ ಆರ್ಥಿಕ ವರ್ಷದಲ್ಲಿ ಸುಮಾರು ೪೨ ಸಾವಿರದ ೮೦೦ ಟನ್ ಸಂಸ್ಕರಿಸಿದ ಜೈವಿಕ ಅನಿಲ ಖರೀದಿಸಲಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಸಚಿವರು ಹಂಚಿಕೊಂಡಿದ್ದಾರೆ.

><><><><><><><><><

ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ಇಂದು ಅಮೆರಿಕ ಮತ್ತು ಚೀನಾ ಹೊಸ ಸುತ್ತಿನ ವ್ಯಾಪಾರ ಮಾತುಕತೆಗಳನ್ನು ಪ್ರಾರಂಭಿಸಲಿವೆ. ವಿಶ್ವದ ಎರಡು ದೊಡ್ಡ ಆರ್ಥಿಕತೆಗಳು ತಮ್ಮ ಪ್ರಸ್ತುತ ವ್ಯಾಪಾರ ಒಪ್ಪಂದವನ್ನು ಇನ್ನೂ ೯೦ ದಿನಗಳವರೆಗೆ ವಿಸ್ತರಿಸಲು ಒಪ್ಪಿಕೊಳ್ಳಬಹುದು. ಮಾತುಕತೆಗಳನ್ನು ಅಮೆರಿಕದ ಹಣಕಾಸು ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಮತ್ತು ಚೀನಾದ ಉಪ ಪ್ರಧಾನ ಮಂತ್ರಿ ಹೆ ಲೈಫೆಂಗ್ ನೇತೃತ್ವ ವಹಿಸಲಿದ್ದಾರೆ. ಎರಡೂ ದೇಶಗಳು ಪರಸ್ಪರ ಸುಂಕಗಳನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಲು ಒಪ್ಪಿಕೊಂಡಿದ್ದ ಅಸ್ತಿತ್ವದಲ್ಲಿರುವ ೯೦ ದಿನಗಳ ಒಪ್ಪಂದವು ಆಗಸ್ಟ್ ೧೨ ರಂದು ಮುಕ್ತಾಯಗೊಳ್ಳಲಿದೆ. ಐರೋಪ್ಯ ಒಕ್ಕೂಟ ಮತ್ತು ಜಪಾನ್‌ನೊಂದಿಗೆ ಅಮೆರಿಕ ವ್ಯಾಪಾರ ಒಪ್ಪಂದಗಳನ್ನು ತಲುಪಿದ ಸ್ವಲ್ಪ ಸಮಯದ ನಂತರ ವಾಷಿಂಗ್ಟನ್ ಮತ್ತು ಬೀಜಿಂಗ್ ನಡುವಿನ ಹೊಸ ಸುತ್ತಿನ ಸಂವಾದವು ನಡೆಯುತ್ತಿದೆ.

><><><><><><><><><

ಭಾರತ-ಸಿಂಗಪುರ ನಡುವಿನ ೧೪ನೇ ಆವೃತ್ತಿಯ ಜಂಟಿ ಮಿಲಿಟರಿ ಸಮರಾಭ್ಯಾಸ ಜೋಧ್ಪುರದಲ್ಲಿ ನಿನ್ನೆಯಿಂದ ಆರಂಭವಾಗಿದೆ. ದಿಟ್ಟ ಕುರುಕ್ಷೇತ್ರ - ೨೦೨೫ ಹೆಸರಿನಲ್ಲಿ ನಡೆಯುತ್ತಿರುವ ಈ ಸಮರಾಭ್ಯಾಸ ಆಗಸ್ಟ್ ೪ರವರೆಗೂ ಮುಂದುವರಿಯಲಿದೆ. ಸಮರ ಕಣದಲ್ಲಿ ಯಂತ್ರಗಳ ಬಳಕೆ, ಕಾರ್ಯಾಚಾರಣೆ ವಿಧಾನ ಮತ್ತಿತರವುಗಳ ಕುರಿತು ಉಭಯ ದೇಶಗಳು ಅಭ್ಯಾಸ ನಡೆಸಿದವು. ಭಾರತೀಯ ಸೇನೆ ತನ್ನ ಸಮರ ಕಲೆಗಳನ್ನು ಪ್ರದರ್ಶಿಸಿತು. ದ್ವಿಪಕ್ಷೀಯ ರಕ್ಷಣಾ ಸಹಕಾರ ಸಂಬಂಧಗಳ ಬಲವರ್ಧನೆ ಜೊತೆಗೆ, ವಿಶ್ವಸಂಸ್ಥೆಯ ಅಣತಿಯಂತೆ ಇಂಟರ್ ಪೋರ್ಟಬಲಿಟಿ ಮತ್ತು ಜಂಟಿ ತರಬೇತಿ ಸಾಮರ್ಥ್ಯಗಳನ್ನು ವಿಸ್ತರಣೆ ಮಾಡುವುದು ಈ

ಸಮರಾಭ್ಯಾಸದ ಉದ್ದೇಶವಾಗಿದೆ. ಭಾರತೀಯ ಸೇನೆಯ ಯಾಂತ್ರೀಕೃತ ಪದಾತಿದಳ ಹಾಗೂ ಸಿಂಗಪುರದ ೪೨ನೇ ರೆಜುಮೆಂಟ್ ನ ಯೋಧರು ಈ ಸಮರಾಭ್ಯಾಸದಲ್ಲಿ ಪಾಲ್ಗೊಂಡಿದ್ದಾರೆ.

><><><><><><><><

ಭಾರತದ ಅಂತಾರಾಷ್ಟ್ರೀಯ ವ್ಯಾಪಾರ ವಲಯದಲ್ಲಿ ಐತಿಹಾಸಿಕ ಕ್ಷಣವೆಂದು ಪರಿಗಣಿಸಲಾಗಿರುವ ಭಾರತ-ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರನ್ನು ಮುಂಬೈನಲ್ಲಿ ನಿನ್ನೆ ಅಭಿನಂದಿಸಲಾಯಿತು.  ಈ ವೇಳೆ, ಬ್ರಿಟನ್ ಮಾರುಕಟ್ಟೆಯಲ್ಲಿ ರಫ್ತು ಅವಕಾಶಗಳ ಕುರಿತಂತೆ ವಿಶೇಷ ಗೋಷ್ಠಿಯೂ ನಡೆಯಿತು. ಅದರಲ್ಲಿ ಒಪ್ಪಂದದ ಅನುಸಾರ ಭಾರತೀಯ ಉದ್ಯಮಿಗಳು ಮತ್ತು ರಫ್ತುದಾರರಿಗೆ ಲಭ್ಯವಿರುವ ಹೊಸ ಅವಕಾಶಗಳ ಕುರಿತು ಬೆಳಕು ಚೆಲ್ಲಲಾಯಿತು.  ಈ ವೇಳೆ ಮಾತನಾಡಿದ ಸಚಿವ ಪಿಯೂಷ್ ಗೋಯಲ್, ಭಾರತ-ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದ ಕೇವಲ ಒಂದು ವ್ಯಾಪಾರ ಒಪ್ಪಂದವಲ್ಲ. ಇದು ಅಭಿವೃದ್ಧಿ ಹೊಂದಿದ ಭಾರತ ಸಾಧಿಸುವ ನಿಟ್ಟಿನಲ್ಲಿ ಒಂದು ದಿಟ್ಟ ಹಾಗೂ ಪರಿವರ್ತನಾಕಾರಿ ಹೆಜ್ಜೆಯಾಗಿದೆ. ಒಪ್ಪಂದದಿಂದಾಗಿ ಮೀನುಗಾರಿಕೆ, ಜವಳಿ, ಮುತ್ತು, ಹವಳ ಮತ್ತು ಆಭರಣ, ಮಾಹಿತಿ ತಂತ್ರಜ್ಞಾನ, ಸೇವಾ ವಲಯ ಹಾಗೂ ಸಣ್ಣ ಕೈಗಾರಿಕಾ ವಲಯದಲ್ಲಿ ಹೊಸ ಸ್ಪರ್ಧಾತ್ಮಕ ಅವಕಾಶಗಳನ್ನು ಸೃಷ್ಟಿಸಲಿದೆ. ಜಾಗತಿಕ ಮಟ್ಟದಲ್ಲಿ ಭಾರತೀಯ ಉತ್ಪಾದಕರಿಗೆ ಸುಲಭ, ಮುಕ್ತ ಮತ್ತು ನ್ಯಾಯಯುತ ಮಾರುಕಟ್ಟೆಗಳನ್ನು ಒದಗಿಸಲು ಸರ್ಕಾರ ಬದ್ಧವಿದೆ ಎಂದು ಹೇಳಿದ್ದಾರೆ.

><><><><><><><><

ಉತ್ತರಪ್ರದೇಶದ ಔಸಾನೇಶ್ವರ್ ಮಹದೇವ್ ದೇಗುಲದ ಬಳಿಯ ಟಿನ್ ಶೆಡ್ ಮೇಲೆ ಬಿದ್ದ ಬೆನ್ನಲ್ಲೇ ಕಾಲ್ತುಳಿತದಂತಹ ಪರಿಸ್ಥಿತಿ ಸಂಭವಿಸಿದ್ದು, ಕನಿಷ್ಠ ಎರಡು  ಮಂದಿ ಮೃತಪಟ್ಟಿದ್ದಾರೆ. ೧೭ ಜನರು ಗಾಯಗೊಂಡಿದ್ದಾರೆ. ಘಟನೆ ಕುರಿತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ದುಃಖ ವ್ಯಕ್ತಪಡಿಸಿದ್ದು, ಮೃತಪಟ್ಟವರ ಕುಟುಂಬಗಳಿಗೆ ತಲಾ ೫ ಲಕ್ಷ ಪರಿಹಾರ ಘೋಷಿಸಿದ್ದಾರೆ.

><><><><><><><><

ಜಾರ್ಜಿಯಾದ ಬಟುಮಿಯಲ್ಲಿ ನಡೆಯುತ್ತಿರುವ ಫಿಡೆ ಮಹಿಳಾ ವಿಶ್ವಕಪ್‌ನ ಫೈನಲ್‌ನಲ್ಲಿ ವಿಜೇತರನ್ನು ತೀರ್ಮಾನಿಸಲು ಇಂದು ನಡೆಯುವ ರ್ಯಾಪಿಡ್ ಮತ್ತು ಬ್ಲಿಟ್ಸ್ ಟೈ ಬ್ರೇಕರ್ ಪಂದ್ಯಗಳಲ್ಲಿ ಭಾರತದ ಕೊನೆರು ಹಂಪಿ ಮತ್ತು ದಿವ್ಯಾ ದೇಶಮುಖ್ ಮುಖಾಮುಖಿಯಾಗಲಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ಅಪರಾಹ್ನ ೧.೩೫ಕ್ಕೆ ಆರಂಭವಾಗಲಿದೆ. ನಿನ್ನೆ ಸಂಜೆ ನಡೆದ ಫೈನಲ್‌ನ ಎರಡನೇ ಸುತ್ತಿನ ಪಂದ್ಯವೂ ಡ್ರಾನಲ್ಲಿ ಅಂತ್ಯಗೊಂಡಿತ್ತು.  ಟೈ ಬ್ರೇಕ್ ಪಂದ್ಯಗಳಲ್ಲಿ ತಲಾ ೧೦ ನಿಮಿಷಗಳ ೨ ರ್ಯಾಪಿಡ್ ಪಂದ್ಯಗಳು ನಡೆಯಲಿವೆ. ಆಗಲೂ ಸಮಬಲ ಮುಂದುವರೆದಲ್ಲಿ ೫ ನಿಮಿಷಗಳ ೨ ಪಂದ್ಯಗಳು ನಂತರ ೩ ನಿಮಿಷಗಳ ೨ ಬ್ಲಿಟ್ಸ್ ಪಂದ್ಯಗಳು ನಡೆಯಲಿವೆ. ಫೈನಲ್ ಪಂದ್ಯದಲ್ಲಿ ಗೆಲುವು ಸಾಧಿಸುವವರಿಗೆ ಮುಂದಿನ ವರ್ಷ ನಡೆಯುವ ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸ್ಪರ್ಧಿಸಲು ಅವಕಾಶ ದೊರೆಯಲಿದೆ. ಈ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಗೆಲುವು ಸಾಧಿಸುವ ಆಟಗಾರ್ತಿ ವಿಶ್ವಚಾಂಪಿಯನ್‌ಶಿಪ್ ಪಟ್ಟ ಹೊಂದಿರುವ ಜು ವೆನ್ಯೂನ್ ವಿರುದ್ಧ ಸೆಣಸಾಟ ನಡೆಸಲು ಅವಕಾಶ ಪಡೆಯಲಿದ್ದಾರೆ.

><><><><><><><><

ಭಾರತದ ತೇಜಸ್ವಿನ್ ಶಂಕರ್ ಎರಡನೇ ಬಾರಿಗೆ ಹೊಸ ರಾಷ್ಟ್ರೀಯ ಡೆಕಥ್ಲಾನ್ ದಾಖಲೆಯನ್ನು ಸ್ಥಾಪಿಸಿದ್ದಾರೆ, ನಿನ್ನೆ ಪೋಲೆಂಡ್‌ನಲ್ಲಿ ನಡೆದ ವೈಸ್ಲಾವ್ ಕ್ಜಾಪಿಯೆವ್ಸ್ಕಿ ಸ್ಮಾರಕ ೨೦೨೫ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ೭ ಸಾವಿರದ ೮೨೬ ಅಂಕಗಳನ್ನು ಗಳಿಸಿ ನಾಲ್ಕನೇ ಸ್ಥಾನ ಪಡೆದರು.

><><><><><><><><